**MS – 063**

-29-

# IV Semester B.Com. Examination, May/June 2014
## (Repeaters) (2010-11)
## KANNADA LANGUAGE – IV
## ವ್ಯಾವಹಾರಿಕ ಕನ್ನಡ ಮತ್ತು ಸಾಹಿತ್ಯ ಸಂವಾದ - 2

Time : 3 Hours Max. Marks : 90

ST. CLARET COLLEGE LIBRARY

**ಭಾಗ - 1**

**ವ್ಯಾವಹಾರಿಕ ಕನ್ನಡ** **50**

I. ಅ) **ಮೂರು ಪ್ರಶ್ನೆಗಳಿಗೆ ಉತ್ತರಿಸಿ :** **(3×10=30)**

1) ಏಕವ್ಯಕ್ತಿ ವರದಿ ಎಂದರೇನು ? ಅದರ ಮಾದರಿಯೊಂದನ್ನು ಸಿದ್ಧಪಡಿಸಿ.

2) ಜಾಹೀರಾತುಗಳಲ್ಲಿ ಮಹಿಳೆಯರನ್ನು ಬಳಸಿಕೊಳ್ಳುತ್ತಿರುವುದರ ಔಚಿತ್ಯವನ್ನು ಕುರಿತು ಚರ್ಚಿಸಿ.

3) ಕನ್ನಡದಲ್ಲಿ ಇ-ಅಂಚೆ ಹಾಗೂ ಅಂತರ್ಜಾಲ ತಾಣಗಳ ಸ್ವರೂಪವನ್ನು ಪರಿಚಯಿಸಿ.

4) ಪತ್ರಿಕಾ ವರದಿಯ ಸ್ವರೂಪ ಮತ್ತು ಅದರ ಪ್ರಕಾರಗಳನ್ನು ವಿವರಿಸಿ.

5) ಇಂದಿನ ವೃತ್ತ ಪತ್ರಿಕೆಗಳ ಕಾರ್ಯವೈಖರಿಯನ್ನು ಪರಿಶೀಲಿಸಿ.

ಆ) **ನಾಲ್ಕಕ್ಕೆ ಟಿಪ್ಪಣಿ ಬರೆಯಿರಿ :** **(4×5=20)**

1) ಸಮಿತಿ ವರದಿ

2) ವರ್ಗೀಕೃತ ಜಾಹೀರಾತುಗಳು

3) ಕನ್ನಡ ಮತ್ತು ಇ-ಕಲಿಕೆ

4) ಕನ್ನಡ ಮತ್ತು ಕಂಪ್ಯೂಟರ್

5) ವಿಶೇಷ ಮಾದರಿ

6) ಕನ್ನಡ ಮತ್ತು ಬಹು ಮಾಧ್ಯಮ.

## ಭಾಗ - 2

## ಸಾಹಿತ್ಯ ಸಂವಾದ - 2

40

II. ಎರಡು ಪ್ರಶ್ನೆಗಳಿಗೆ ತಾರ್ಕಿಕ ಆಲೋಚನೆ ಆಧರಿಸಿ ಉತ್ತರಿಸಿ : (2×5=10)

1) ಧರ್ಮರಾಯ ನೆತ್ತವಾಡಲು ಗುರುವಚನ ಕಾರಣವೇ ? ಚರ್ಚಿಸಿ.

2) ಚದುರಂಗದ ಆಟಗಾರರಲ್ಲಿ ಉಂಟಾದ ವೈಮನಸ್ಸನ್ನು ಕುರಿತು ಬರೆಯಿರಿ.

3) 'ಬಹುಜನರ ಅಚ್ಚು-ಮೆಚ್ಚಿನ ಆಟ ಕ್ರಿಕೆಟ್' – ಈ ಹೇಳಿಕೆಯನ್ನು ಸಮರ್ಥಿಸಿ.

4) ಜಾಗತೀಕರಣದ ಸಂಕೇತವಾಗಿರುವ ಗಿಡುಗ ದೇಶೀಯ ನೆಲದಲ್ಲಿ ಉಂಟು ಮಾಡಿದ ಪ್ರಭಾವ ಎಂತಹದು ?

III. ಎರಡು ಪ್ರಶ್ನೆಗಳಿಗೆ ವಿವರಣಾತ್ಮಕ ಉತ್ತರ ಬರೆಯಿರಿ : (2×5=10)

1) ಪಾಶ್ಚಾತ್ಯ ಸಂಸ್ಕೃತಿಯು ಜಾಗತೀಕರಣದ ಹೆಸರಿನಲ್ಲಿ ನೆಲಮೂಲ ಸಂಸ್ಕೃತಿ ಮತ್ತು ಬದುಕಿನ ಮೇಲೆ ಉಂಟು ಮಾಡಿದ ಆಕ್ರಮಣವನ್ನು ವಿವರಿಸಿ.

2) ಆಧುನಿಕ ಯುಗದಲ್ಲಿ ಯಂತ್ರಗಳ ಅನಿವಾರ್ಯತೆಯನ್ನು ವಿಶ್ಲೇಷಿಸಿ.

3) ಸೇವಾ ಗ್ರಾಮದ ಸ್ವರೂಪವೇನು ?

4) 'ಎಲ್ಲರಿಗೂ ಬ್ಯಾಟಿಂಗ್ ಬಗ್ಗೆ ಇದ್ದ ಆಸಕ್ತಿ, ಒಲವು ಬೌಲಿಂಗ್ ಬಗ್ಗೆ ಇರಲಿಲ್ಲ" – ಈ ಹೇಳಿಕೆಯನ್ನು ಚರ್ಚಿಸಿ.

IV. ಎರಡು ಪ್ರಶ್ನೆಗಳಿಗೆ ಸ್ವಂತ ಆಲೋಚನೆ/ ಅನುಭವಗಳ ಹಿನ್ನೆಲೆಯಲ್ಲಿ ವಿಮರ್ಶಾತ್ಮಕ ಉತ್ತರ ಬರೆಯಿರಿ : (2×10=20)

1) ಕಾಲ್‌ಸೆಂಟರ್ ಉದ್ಯೋಗಿಗಳ ಯಾಂತ್ರಿಕ ಬದುಕನ್ನು ಕುರಿತು ಚರ್ಚಿಸಿ.

2) ಅರ್ಥಪೂರ್ಣವಾದ ಕ್ರೀಡೋತ್ಸಾಹ ಹೇಗಿರಬೇಕು ? ನಿಮ್ಮ ಅಭಿಪ್ರಾಯಗಳನ್ನು ತಿಳಿಸಿ.

3) ದ್ಯೂತದ ಹಿನ್ನೆಲೆಯಲ್ಲಿ ಮಾನವ ಸ್ವಭಾವದ ವಿಭಿನ್ನ ನೆಲೆಗಳು ಅನಾವರಣಗೊಳ್ಳುವ ಬಗೆಯನ್ನು ವಿಶ್ಲೇಷಿಸಿ.

4) ಯಂತ್ರಯುಗ ಹಾಗೂ ಪಾರಂಪರಿಕ ಜೀವನ ಶೈಲಿಯ ವೈರುದ್ಧ್ಯಗಳನ್ನು 'ಎರಡು ಚಿತ್ರಗಳು, ಎರಡು ಆಯ್ಕೆಗಳು' – ಲೇಖನದ ಹಿನ್ನೆಲೆಯಲ್ಲಿ ನಿರೂಪಿಸಿ.